ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರಿಗೆ ಜಾಸ್ತಿ ಕೊಡಬೇಕೆಂದು ತೀರ್ಮಾನವಾಗಿದೆ. ಪಟೇಲರ ಹಕ್ಕು ಎಷ್ಟಿದೆ, ಅವರ ಕೆಲಸಕಾರ್ಯವೆಷ್ಟು, ಗ್ರಾಮದಲ್ಲಿ ಅವರ ಕೆಲಸವೆಷ್ಟಿದೆ ಎಂಬುದು ನಿರ್ಧಾರವಾಗಿಲ್ಲ. ಆದುದರಿಂದ ಅದನ್ನೆಲ್ಲಾ ಪರಿಶೀಲಿಸಿ ಸರಕಾರ ತೀರ್ಮಾನ ಮಾಡುವುದು.

ಶ್ರೀ ಬಿ. ಜಿ. ಬಣಕಾರ್.—ಪಟೇಲರು, ತೋಟಿ ತಳವಾರರು ಮುಂತಾದವರ ಬಗ್ಗೆ ಸರಕಾರದ ಧೋರಣೆಯೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗ್ರಾಮ ನೌಕರರ ಬಗ್ಗೆ ಈ ವರ್ಷದ ಆಖೈರಿನೊಳಗೆ ಒಂದು ತೀರ್ಮಾನವಾಗಬೇಕಾಗಿದೆ. ಈ ವರ್ಷದ ಕೊನೆಯವರೆಗೆ ಅವರನ್ನು ಮುಂದುವರೆಸುತ್ತೇವೆ.

PROMOTION OF DRAUGHTSMEN IN PUBLIC WORKS DEPARTMENT

781 Sri A G KODAGI. (Baindur) Will the Minister of Public Works and Electricity be plased to state.—

(*a*) the total strength of Draughtsmen in Public Works Department.

(*b*) of th m the number of Draughtsmen promoted to the posts of Assistant Engineers in the ratio of 7: 1 vacancies, reserved for Junior Engineers (Non-graduates) and Draughtsmen respectively as per Government Order No. PWD 557 SPG 66 dated 12th June 1969?

SRI H. M. CHANNABASAPPA.—(Minister for Public Works)

(*a*) 936.

(*b*) Nill. The matter is under consideration.

SRI A. G. KODAGI:—In reply to (b) it is stated that the matter is under consideration may I know the reason for not following the Government Order?

† SRI H. M. CHANNABASAPPA.—The Cadre and Recruitment Rules will have to be properly changed and the changing of the Rules is under consideration.

SRI A. G. KODAGI.—Is there any disadvantage to the Department if a common designation is givien to the Diploma Engineers working as Junior Engineers (Non-Graduates) and Draughtsmen who are on the same scale of pay as has been done in M. S.E. B.?

SRI H. M. CHANNABASAPPA.—M. S. E. B is functioning on a different footing and the Government is functioning on a different footing. It would not be correct to equate them.

ಶ್ರೀ ಎ. ಬಿ. ರಾಮಸ್ವಾಮಿ.—ಸ್ವಾಮಿ (ಅ) ಗೆ ಉತ್ತರವಾಗಿ ಡ್ರಾಫ್ಟ್‌ಮನ್‌ಗಳಿಗೆ ೫೩ ಜನಕ್ಕೆ ಬಡ್ತಿ ಕೊಟ್ಟೀದ್ದೇವೆ ಎಂದು ಹೇಳಿದ್ದೀರಿ. ಇದರಲ್ಲಿ ಹರಿಜನ ಮತ್ತು ಗಿರಿಜನರು ಎಷ್ಟು ಇದ್ದಾರೆಂದು ತಿಳಿಸುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಇವರಲ್ಲಿ ಡ್ರಾಫ್ಟ್ಸ್‌ಮನ್‌ಗಳ ಒಟ್ಟು ಸಂಖ್ಯೆ ೯೩೬ ಇದೆ ಅಂತ ಹೇಳಿದಿಯೇ ಹೊರತು ಬಡ್ತಿ ಕೊಟ್ಟಿದ್ದೇವೆಂದು ಹೇಳಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.— ಸ್ವಾಮಿ, ಪಿ. ಡಬ್ಲ್ಯು. ಡಿ. ೫೫೭ ಎಸ್.ಜಿ.ಪಿ ೬೬ನೇ ಕ್ರಮಾಂಕದ ೧೨ನೇಜೂನ್ ೧೯೬೯ನೇ ದಿನಾಂಕದ ಆದೇಶದ ಮೇರೆಗೆ ಆವರಿಗೆ ಬಡ್ತಿ ಕೊಡುವುದಕ್ಕೆ ಒಂದು ಸರ್ಕಾರ್ ಹೊರಡಿಸಿರುವುದು ನಿಜವೇ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಾವು ಆ ಜಿ. ಒ ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ. ತಾವು ನೂಡದೇ ಇದ್ದರೆ ನಾವು ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.— ತಾವು ಈ ಸಭೆಯಲ್ಲಿ ಅಷ್ಟು ಲಘುವಾಗಿ ಹೇಳತಕ್ಕದ್ದು ಸರಿಯಲ್ಲ. ತಮ್ಮ ಸರ್ಕಾರ್ ಪ್ರಕಾರ ಈ ಡ್ರಾಫ್ಟ್ಸ್‌ಮನ್‌ಗಳಿಗೆ ೭:೧ರ ಪ್ರಮಾಣದಲ್ಲಿ ಬಡ್ತಿ ಕೊಟ್ಟಿರುವ ನೀತಿ ಸರಿಯಲ್ಲ ಎಂದು ಹೇಳಿದರೆ ಈ ರೀತಿ ನಮ್ಮನ್ನೆ ಜಿ. ಒ. ತೆಗೆದುಕೊಂಡು ನೋಡಿ ಎಂದು ಹೇಳುವುದು ಸರಿಯಲ್ಲ: ನಮಗೆ ಆ ರೀತಿ ಹೇಳುವುದಾದರೆ ನಮಗೆ ಜಿ. ಒ. ಕಾಪಿಯನ್ನು ಒದಗಿಸಿ ಕೊಡಿ ಎಂದು ಕೇಳಬೇಕಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅಧ್ಯಕ್ಷರೆ, ಇದು ಒಂದು ಸಂಪ್ರದಾಯ. ಯಾವುದು ಸರ್ಕಾರದ ಪ್ರಕಟಣೆಯಲ್ಲಿ ದೊರೆಯುತ್ತದೋ ಅದನ್ನು ಈ ಸಭೆಯಲ್ಲಿ ಕೊಡತಕ್ಕಂಥಾದ್ದು ಅನಗತ್ಯ ಎನ್ನುವುದು ಸರ್ಕಾರದ ಅಭಿಪ್ರಾಯ.

SRI A. G. KODAGI—What is the opinion of the Goverment about evolving a common designation to the Diploma Engineers(non-gradua tes) and Draughtsmen in P. W. D. because there are two categories?

SRI H. M. CHANNABASAPPA —The Ho . Member is not clear. But any way, if I have understood him, I want to tell him that Draughtsmen are different from Engineers. Drughtsmen have to do the duties and functions of Draughtsmen and Engineers have to do the duties and functions of Engineers.

MOSQUITO NUISANCE DUE TO BHADRA PROJECT

805. SRI N. G. HALAPPA (Channagiri).—Will the Minister for Health be placed to state.

(*a*) whether the Government is aware of the Mosquito menace due to Bhadra Project;

(*b*) if so, the action taken or proposed to be taken in the matter ?

SRI H. SIDDAVEERAPPA (Minister for Health).—

(*a*) No complaints have been received by Government about any unusual mosquito nuisance due to Bhadra Project.

(*b*) Does not arise.

ಶ್ರೀ ಎನ್. ಜಿ. ಹಾಲಪ್ಪ.—ಸ್ವಾಮಿ ತಾವು (ಅ) ಗೆ ಉತ್ತರವಾಗಿ No complaints have been received by Government about any unusual mosquito nuisance due to Bhadra Project ಎಂದು ಹೇಳಿದ್ದೀರಾ? ಹಾಗಾದರೆ ಯೂಷುಯಲ್ ಮೊಸ್ಕ್ವಿಟೋ ಯಾವುದು ಎಂದು ಸರ್ಕಾರದ ಗಮನಕ್ಕೆ ಬಂದಿದೆ ?